ಇದು 'ಸಕ್ಕರೆ'ಯ ಕಿರುಪರಿಚಯ. ಹೀಗೆ ಸಿಹಿಯಾಗಿರುವ ಸಕ್ಕರೆಯ ಎಲ್ಲ ಗುಣಸಮೂಹವನ್ನು 'ಸಕ್ಕರೆ' ಎಂಬ ಪದ ಎತ್ತಿಹಿಡಿಯುತ್ತದೆ. ಸಕ್ಕರೆ – ಎಂಬ ಪದವನ್ನು ನಾವು ಕೇಳಿದ ಕೂಡಲೇ ಅದು ಏನನ್ನು ಪ್ರತಿನಿಧಿಸುತ್ತಿದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಆದರೆ ನಮಗೆ ಸಕ್ಕರೆಯ ಅನುಭವ, ಎಂದರೆ ಸಿಹಿಯ ಅನುಭವ, ಆಗಬೇಕಾದರೆ 'ಸಕ್ಕರೆ' ಎಂಬ ಶಬ್ದದಿಂದ ನೇರ ಪ್ರಯೋಜನವಿರದು. 'ಕಾಫಿಗೆ ಸಕ್ಕರೆ ಕಡಿಮೆ ಇದು; ಸ್ವಲ್ಪ ಸಕ್ಕರೆಯನ್ನು ತಾ' ಎಂದು ಹೇಳಿ ಸಕ್ಕರೆಯನ್ನು ತರಿಸಿಕೊಳ್ಳಬಹುದು; ಆದರೆ ಕಾಫಿಗೆ ಸಿಹಿಯ ರುಚಿ ಬರಲು ಅದಕ್ಕೆ 'ಸಕ್ಕರೆ' ಎಂಬ ವಸ್ತುವನ್ನೇ ಕಾಫಿಯಲ್ಲಿ ಬೆರೆಸಬೇಕು. ಹಾಗಲ್ಲದೆ ಸಾವಿರ ಸಲ 'ಸಕ್ಕರೆ' 'ಸಕ್ಕರೆ' ಎಂದು ಒದರುವುದರಿಂದ ಕಾಫಿಗೆ ಸಿಹಿಯ ಗುಣ ಬರದು. ನಿತ್ಯದ ಜೀವನದಲ್ಲಿ ಇಂಥ ಹತ್ತುಹಲವು ಪ್ರಸಂಗಗಳು ಬೇರೆ ಬೇರೆ ಆಯಾಮಗಳಲ್ಲಿ ನಮ್ಮ ಅನುಭವಕ್ಕೆ ಬರುತ್ತಿರುತ್ತವೆ. 'ಸಹಾಯ' ಎಂಬ ಶಬ್ದವನ್ನು ದಿನದ ಇಪ್ಪತ್ತನಾಲ್ಕು ಗಂಟೆಗಳು ಒಂದೇ ಸಮನೆ ಕೂಗಿದರೂ ಯಾರೊಬ್ಬರಿಗೂ ಅದರಿಂದ ಕಿಂಚಿತ್ತೂ ಸಹಾಯ ದೊರಕದು. 'ಸಹಾಯ' ಎನ್ನುವುದು ಆಗಬೇಕಾದ್ದು ನಮ್ಮ ಕ್ರಿಯೆಯ ಮೂಲಕ; ಅದನ್ನು ನಾವು 'ಮಾಡಬೇಕು'. ಹಸಿವಿದ್ದಾಗ ಆಹಾರವನ್ನು ಸೇವಿಸಬೇಕೇ ಹೊರತು, ಅನ್ನದ ಜಪದಿಂದ ಹೊಟ್ಟೆ ತುಂಬದು. 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ನಾಲಿಗೆಯಲ್ಲಿ ನುಡಿದು ಒಬ್ಬ ವ್ಯಕ್ತಿಯನ್ನು ನಾವು ದ್ವೇಷಿಸಲು ಸಾಧ್ಯವಿದೆ. ಹಾಗಾದರೆ 'ಪ್ರೀತಿ' ಎನ್ನುವುದು ಪ್ರೀತಿ ಎನ್ನುವ ಶಬ್ದದಲ್ಲಿದೆಯೇ ಅಥವಾ ನಮ್ಮಲ್ಲಿದೆಯೆ? ಇದು ನಾವು ಯೋಚಿಸಬೇಕಾದ ಸಂಗತಿ. ಅಧ್ಯಾತ್ಮಸಾಧನೆಯಲ್ಲಿ ಎದುರಾಗುವ ಶಬ್ದಗಳ ಮಿತಿಯನ್ನು ಕುರಿತು ಹೇಳುವುದು ಮೇಲಿನ ಝೆನ್‌ಕ್ಷಣದ ಧ್ವನಿಯಾಗಿದೆ.

'ಬುದ್ಧತ್ವ', 'ಬೋಧೆ' – ಮುಂತಾದ ಈ ಶಬ್ದಗಳಿಗೆ ದಿಟವಾದ ಅರ್ಥ ಒದಗುವುದು, ಶಕ್ತಿ ಬರುವುದು ಅವು ನಮ್ಮಲ್ಲಿ ಅರಳಿದಾಗ; ನಮ್ಮ ವ್ಯಕ್ತಿತ್ವದ ಭಾಗಗಳಾದಾಗ ಮಾತ್ರವೇ. ಹಾಗಲ್ಲದೆ, ಸುಮ್ಮನೆ 'ಬೋಧಿ ಬೋಧಿ' ಎಂದು ಬಡಬಡಿಸಿದರೂ ಪ್ರಯೋಜನವಿರದು. ಬೋಧಿ ಎನ್ನುವುದು ನಮ್ಮ ಅನುಭವವಾಗಬೇಕು; ಅದೇ ನಾವಾಗಬೇಕು. ಆದರೆ ಅಧ್ಯಾತ್ಮಸಾಧನೆಯಲ್ಲಿ ಹಲವು ಬಾರಿ ನಾವು ದಿಕ್ಕು ತಪ್ಪುತ್ತೇವೆ. ಶಬ್ದಗಳು ನಮ್ಮ ದಾರಿಯನ್ನು ತಪ್ಪಿಸಬಹುದು. ಸಕ್ಕರೆಯ ಅನುಭವ ಇಲ್ಲದೆಯೇ ಸಕ್ಕರೆಯ ಶಬ್ದವನ್ನು ಉಚ್ಚರಿಸಬಹುದು; ಅದರ ಬಗ್ಗೆ ಮಾತನಾಡಬಹುದು. ಆದರೆ 'ಸಕ್ಕರೆ' ಎಂಬ ಶಬ್ದದ ಉಪಚಾರಕ್ಕೂ ನಾಲಿಗೆಯ ಮೇಲೆ ಅದನ್ನಿರಿಸಿಕೊಂಡಾಗ ಸ್ವಾನುಭವಕ್ಕೂ ವ್ಯತ್ಯಾಸವುಂಟಷ್ಟೆ! ಝೆನ್‌ಗುರು ಇಲ್ಲಿ ಅಂಥ ವ್ಯತ್ಯಾಸದ ಬಗ್ಗೆ ಮಾತನಾಡುತ್ತಿರುವುದು. ಬೋಧಿ – ಎಂಬ ಪದ ನಮಗೆ ಪರಿಚಯವಿರಬಹುದು; ಆದರೆ ಅದೇ ಬೋಧಿಯ ಅನುಭವ ಆಗಲಾರದು. ಪ್ರವಚನಗಳನ್ನು ಕೇಳಿ ಕೇಳಿ, ಪುಸ್ತಕಗಳನ್ನು ಓದಿ ಓದಿ, ಬುದ್ಧತ್ವದ ಶಬ್ದವನ್ನು ಕಿವಿಯಲ್ಲಿ ತುಂಬಿಕೊಂಡು, ಅದೇ ಅನುಭವ ಎಂದು ನಂಬಿಕೊಂಡು, ಬುದ್ಧನಾಗಿಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿ ಓಲಾಡುವವರ ಶಬ್ದದ ಹೊರೆಯನ್ನೂ ಅರ್ಥದ ಪೊರೆಯನ್ನೂ ನನ್‌ಸೆನ್ ಇಲ್ಲಿ ನಿವಾರಿಸುತ್ತಿದ್ದಾನೆ. ಬುದ್ಧತ್ವವನ್ನು ಶಬ್ದದ ಬಂಧನದಿಂದ ಬಿಡುಗಡೆಗೊಳಿಸುವ ತವಕ ಅವನದ್ದು.